ತೊಂದರೆಯನ್ನು ನಿವಾರಿಸಲು ಮೊಕದ್ದಮೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬಾಕಿ ಇರುವ ಸ್ಥಳಗಳಲ್ಲಿ ಹೊಸ: ಅಧಿಕ ನ್ಯಾಯಾಲಯಗಳನ್ನು ಸ್ಥಾಪಿಸುವುದು, ನ್ಯಾಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು, ನ್ಯಾಯಾಧೀಶರಿಗೆ ಮೊಕದ್ದಮೆಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ಅವಶ್ಯವಿರುವ ಸವಲತ್ತುಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ದಿಕ್ಕಿನಲ್ಲಿ, ಬಿಜಾಪುರ ಜಿಲ್ಲೆಯಲ್ಲಿ ಪೈಲೆಟ್ ಪ್ರಾಜೆಕ್ಟ ಯೋಜನೆಯಡಿಯಲ್ಲಿ ಆರು ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.

ಇ) ಪ್ರಕರಣಗಳನ್ನು ಇಂತಿಷ್ಟೆ ಕಾಲದಲ್ಲಿ ತೀರ್ಮಾನಿಸಲು ಯಾವುದೇ ಕಾಲಮಿತಿ ಹಾಕಿಕೊಂಡಿಲ್ಲ. ಈ ದಿಕ್ಕಿನಲ್ಲಿ ನಿಯಮಾವಳಿಯನ್ನು ರೂಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿಲ್ಲ.

ಈ) ಉದ್ಭವಿಸುವುದಿಲ್ಲ.

ವಿಜಾಪುರ - ಗುಲ್ಬರ್ಗಾ ರಸ್ತೆ ಕುರಿತು

2134 - ಶ್ರೀ ಬಸವನಗೌಡ ಪಾಟೀಲ್ (ವಿಜಾಪರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಗುಲ್ಬರ್ಗಾ ರಸ್ತೆ ತೀವ್ರ ಹದೆಗಟ್ಟಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹುಬ್ಬಳ್ಳಿಯಿಂದ ಅಂಕೋಲಾ ರಸ್ತೆಯ ಮಾದರಿಯಂತೆ ಬೆಳಗಾಂವ ವಿಜಾಪುರ ಹೈದ್ರಾಬಾದ್ ರಸ್ತೆಯನ್ನು ವಿಶೇಷ ಯೋಜನೆಯಲ್ಲಿ ತೆಗೆದುಕೊಂಡು ಈ ರಸ್ತೆಯನ್ನು ನಿರ್ಮಿಸಲು ಸರಕಾರ ಕ್ರಮ ಕೈಗೊಳ್ಳುವುದೇ,

ಇ) ಈ ನಿಟ್ಟಿನಲ್ಲಿ ಸರಕಾರದ ಉದ್ದೇಶವೇನು?

ಶ್ರೀ ಶಿವನಾಂದ ಹೆಚ್.ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಬಿಜಾಪುರ-ಗುಲ್ಬರ್ಗಾ ರಸ್ತೆಯ ಕೆಲವು ಭಾಗಗಳು ಕೆಟ್ಟಿದ್ದು ಸುಗಮ ವಾಹನ ಸಂಚಾರಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಇಂತಹ ಪ್ರಸ್ತಾಪ ಇರುವುದಿಲ್ಲ.

ಇ) ಸದರಿ ರಸ್ತೆಯನ್ನು ಲಭ್ಯ ಮಾಡಿರುವ ಅನುದಾನದಲ್ಲಿ ಸೂಕ್ತವಾಗಿ ನಿರ್ವಹಣೆಮಾಡಬೇಕೆಂದು ಮುಖ್ಯ ಇಂಜಿನಿಯರ್‌ರವರಿಗೆ ಸೂಚಿಸಲಾಗಿದೆ.

ರಾಷ್ಟ್ರೀಯ ನೀರು ಪೂರೈಕೆ ಯೋಜನೆ ಕುರಿತು.

2135 - ಶ್ರೀ ಯು.ಬಿ. ಬಣಕಾರ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994-95ನೇ ಸಾಲಿನಲ್ಲಿ ರಾಜ್ಯ ಸರ್ಕಾರ ರಾಷ್ಟ್ರೀಯ ನೀರು ಪೂರೈಕೆ ಯೋಜನೆ (ಏನಆರ್ ಡಬ್ಲ್ಯೂಎಸ್) ಯಲ್ಲಿ ನಿಗದಿಪಡಿಸಿದ ಜಿಲ್ಲಾವಾರು ಗುರುತು ಎಷ್ಟು? ಎಷ್ಟು ಯೋಜನೆಗಳು ಪೂರ್ತಿಯಾಗಿವೆ?*

ಆ) *1994-95ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಗೆ ಈ ಯೋಜನೆಯಲ್ಲಿ ನಿಗದಿಪಡಿಸಿದ್ದ ಗುರಿ ಎಷ್ಟು? ಸಾಧನೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)*

ಇ) *1994-95ನೇ ಸಾಲಿನಲ್ಲಿ ಹಿರೇಕೆರೂರು ತಾಲ್ಲೂಕಿನಲ್ಲಿ ಈ ಯೋಜನೆಗಳನ್ನು ಯಾವ ಯಾವ ಗ್ರಾಮಗಳಲ್ಲಿ ತೆಗೆದು ಕೊಳ್ಳಲಾಗಿತ್ತು? ಯಾವ ಗ್ರಾಮದಲ್ಲಿ ಪೂರ್ತಿಯಾಗಿದೆ? ಪ್ರತಿಯೊಂದು ಗ್ರಾಮದಲ್ಲಿ ಯಾವ ಹಂತದಲ್ಲಿದೆ?*

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್. ಸಚಿವರು) :

ಅ)

	ಗುರಿ	ಸಾಧನೆ
ಕೊಳವೆ ನೀರು ಸರಬಾರಜು ಯೋಜನೆ	374	383
ಕಿರುನೀರು ಸರಬರಾಜು ಯೋಜನೆ	639	733
ಕೊಳವೆ ಬಾವಿಗಳು	3190	3382

(ಜಿಲ್ಲಾವಾರು ವಿವರಗಳನ್ನು ಅನುಭಂಧ-1ರಲ್ಲಿ ಕೊಟ್ಟಿದೆ)

		ಗುರಿ	ಸಾಧನೆ
ಆ)	ಕೊಳವೆ ನೀರು ಸರಬರಾಜು ಯೋಜನೆ	32	32
	ಕಿರುನೀರು ಸರಬರಾಜು ಯೋಜನೆ	34	39
	ಕೊಳವೆ ಬಾವಿಗಳು	118	127

(ತಾಲ್ಲೂಕುವಾರು ವಿವರಗಳನ್ನು ಅನುಬಂಧ-2ರಲ್ಲಿ ಕೊಟ್ಟಿದೆ)

ಇ) **ಕೊಳವೆ ನೀರು ಸರಬರಾಜು ಯೋಜನೆ:**

ಗ್ರಾಮ	ಹಂತ
1. ಗೊರಟಿಕೊಂಡು 2. ತಾವರಗಿ	
3. ಚಿಪ್ಪಾಯಿಕೊಪ್ಪ. 4.ಹೊಲಟಿಕೊಂಡ	ಮುಗಿದಿದೆ.

ಕಿರುನೀರು ಸರಬರಾಜು ಯೋಜನೆ:

ಗ್ರಾಮ	ಹಂತ
1. ದೂಪನಹಳ್ಳಿ 2. ಲಿಂಗಾಪುರ	ಮುಗಿದಿದೆ.
3. ಪುರಪುಂಡಿಕೊಪ್ಪ 4. ಜೋಗಿಹಳ್ಳಿ	ಪ್ರಗತಿಯಲ್ಲಿದೆ.

ಕೊಳವೆ ಬಾವಿಗಳು

ಗ್ರಾಮ	ಹಂತ
1. ಮಸೂರ 2. ಸಾತೇನಹಳ್ಳಿ. 3. ಬಾಟಾಪುರ ಪ್ಲಾಟ್	
4. ಕಣವಿಶಿದ್ಧಿಗೇರಿ ಫ್ಲಾಟ್ 5. ಹಂಸಬಾವಿ ಹರಿಜನ ಕಾಲೋನಿ	
6. ಗಂಗಾಯಕೊಪ್ಪ 7. ಅವಿನಕೊಪ್ಪ 8. ದಾಸನಕೊಪ್ಪ	
9. ಎಲವದಹಳ್ಳಿ 10. ಹುಲ್ಲತ್ತಿ 11. ಬೋಗಚಿಕೊಪ್ಪ	ಮುಗಿದಿದೆ.

1994-95ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ತಾಲ್ಲೂಕುಗಳಲ್ಲಿ ರಾಷ್ಟ್ರೀಯ ನೀರು ಸರಬರಾಜು ಯೋಜನೆಯಡಿಯಲ್ಲಿ ನಿಗದಿಪಡಿಸಿದ ಹಾಗೂ ಸಾಧಿಸಿದ ನೀರು ಸರಬರಾಜು ಯೋಜನೆಯ ವಿವರಗಳು :

ಪಟ್ಟಿ - 2

ಸ. ಸಂ.	ತಾಲ್ಲೂಕಿನ ಹೆಸರು	ಕೊಳವೆ ನೀರು ಸರಬರಾಜು ಯೋಜನೆ		ಕಿರುನೀರು ಸರಬರಾಜು ಯೋಜನೆ		ಕೊಳವೆ ಬಾವಿ	
		ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
.	ಧಾರವಾಡ	4	4	5	8	10	8
.	ಹುಬ್ಬಳ್ಳಿ	-	-	1	1	6	5
.	ಕಲಘಟಗಿ	-	-	3	3	6	6
.	ಕುಂದಗೋಳ	-	-	-	-	5	3
.	ಶಿಗ್ಗಾಂವ್	5	5	2	2	6	6
.	ಹಾವೇರಿ	3	3	2	2	10	13
.	ಹಾನಗಲ್	2	2	2	2	11	14
	ಹಿರೇಕೆರೂರು	4	4	2	2	10	11

9.	ರಾಣೆಬೆನ್ನೂರು	3	3	3	3	10	13
10.	ಬ್ಯಾಡಗಿ	-	-	-	-	4	6
11.	ಸವಣೂರ	1	1	3	3	3	4
12.	ಗದಗ	3	2	1	4	8	6
13.	ಮುಂಡರಗಿ	-	-	2	1	1	1
14.	ನರಗುಂದ	-	1	-	-	1	1
15.	ನವಲಗುಂದ	-	-	-	2	11	12
16.	ರೋಣ	4	4	5	5	8	8
17.	ಶಿರಹಟ್ಟಿ	3	3	3	1	8	10
	ಒಟ್ಟು	**32**	**32**	**34**	**39**	**118**	**127**

1994-95ನೇ ಸಾಲಿನಲ್ಲಿ ರಾಷ್ಟ್ರೀಯ ನೀರು ಸರಬರಾಜು ಯೋಜನೆಗಳ ಜಿಲ್ಲಾವಾರು ಗುರಿ ಹಾಗೂ ನಿಗದಿಪಡಿಸಿದ ಹಾಗೂ ಸಾಧನೆಗಳ ವಿವರಗಳು (ಪೂರ್ತಿಯಾದವು) :

ಪಟ್ಟಿ - 1

ಕ್ರ. ಸಂ.	*ಜಿಲ್ಲೆಯ ಹೆಸರು*	*ಕೊಳವೆ ನೀರು ಸರಬರಾಜು ಯೋಜನೆ*		*ಕಿರುನೀರು ಸರಬರಾಜು ಯೋಜನೆ*		*ಕೊಳವೆ ಬಾವಿ*	
		ಗುರಿ	*ಸಾಧನೆ*	*ಗುರಿ*	*ಸಾಧನೆ*	*ಗುರಿ*	*ಸಾಧನೆ*
1.	ಬೆಂಗಳೂರು (ಗ್ರಾ)	7	10	40	39	182	221
2.	ಬೆಂಗಳೂರು (ನಗರ)	10	10	37	63	186	177
3.	ಕೋಲಾರ	13	12	57	78	125	143
4.	ತುಮಕೂರು	18	14	50	62	103	199
5.	ಚಿತ್ರದುರ್ಗ	10	5	39	38	203	72
6.	ಶಿವಮೊಗ್ಗ	16	23	29	28	265	254
7.	ಚಿಕ್ಕಮಗಳೂರು	7	16	14	16	200	203
8.	ಮೈಸೂರು	40	38	59	53	272	178
9.	ಮಂಡ್ಯ	18	26	32	82	112	136

10.	ಹಾಸನ	9	20	21	18	160	423
11.	ದಕ್ಷಿಣ ಕನ್ನಡ	39	33	26	20	263	125
12.	ಕೊಡಗು	6	-	12	5	103	84
13.	ಬೆಳಗಾಂ	50	46	39	31	155	115
14.	ಧಾರವಾಡ	32	32	34	39	18	127
15.	ಉತ್ತರ ಕನ್ನಡ	18	17	22	19	84	92
16.	ಬಿಜಾಪುರ	15	30	23	47	107	138
17.	ಗುಲ್ಬರ್ಗ	18	14	19	23	163	241
18.	ಬೀದರ್	13	4	36	25	129	125
19.	ರಾಯಚೂರು	27	20	33	29	134	153
20.	ಬಳ್ಳಾರಿ	8	13	17	18	126	176
	ಒಟ್ಟು	**374**	**383**	**639**	**733**	**3190**	**3382**

ಗೋಕಾಕ್ ತಾಲ್ಲೂಕಿನಲ್ಲಿರುವ ಲೋಕಪಯೋಗಿ ಇಲಾಖೆಯ ರಸ್ತೆಗಳ ದುರಸ್ಥಿ.

2136 - ಶ್ರೀ ಚಂದ್ರಶೇಖರ ನಾಯಕ (ಗೋಕಾಕ್) :ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಉದ್ದಳತೆ ಎಷ್ಟು? ಅವುಗಳಲ್ಲಿ ರಾಜ್ಯ ಹೆದ್ದಾರಿ ಉದ್ದಳತೆ ಜಿಲ್ಲೆಯ ಮುಖ್ಯ ರಸ್ತೆಗಳ ಉದ್ದಳತೆ ಮತ್ತು ಇತರ ಜಿಲ್ಲಾ ರಸ್ತೆಗಳ ಉದ್ದಳತೆ ಎಷ್ಟು?

ಆ) 1995-96 ರಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಆಗಲ ಹೆಚ್ಚಿಸಲು ಮತ್ತು ದುರಸ್ತಿ ಕುರಿತು ಮಂಜೂರಾದ ಹಣವೆಷ್ಟು?

ಇ) ಲೋಕೋಪಯೋಗಿ ಇಲಾಖೆಯ ರಸ್ತೆಗಳಿಗೆ ಈ ವರ್ಷ ಖರ್ಚಾದ ಹಣವೆಷ್ಟು? ಯಾವ ಯಾವ ರಸ್ತೆಗಳಿಗೆ ಎಷ್ಟೆಷ್ಟು (ವಿವರ ಕೊಡುವುದು)

ಈ) 1995-96 ರಲ್ಲಿ ಜಿಲ್ಲಾ ಪಂಚಾಯ್ತಿಗಳನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿಕೊಡುವ ರಸ್ತೆಗಳು ಯಾವುವು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಗೋಕಾಕ್ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು ರಸ್ತೆ ಉದ್ದ 364.09 ಕಿ.ಮೀ.